# ಬಂಗಾರವಿಡಬಾರೆ ನಿನಗೊಪ್ಪುವ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 417.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 199.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 with few very minor changes, which are not considered here.
5. **Note:** Singer has followed these wordings.

ರಾಗ: ಧನ್ಯಾಸಿ ತಾಳ: ಆದಿ

ಬಂಗಾರವಿಡಬಾರೆ ನಿನಗೊಪ್ಪುವ ಬಂಗಾರವಿಡಬಾರೆ ॥ ಪ ॥

ರಂಗನಾಥನ ದಿವ್ಯ ಮಂಗಳ ನಾಮವೆಂಬ ಬಂಗಾರವಿಡಬಾರೆ ॥ ಅಪ ॥

ಮುತ್ತೈದೆತನವೆಂಬ ಮುಖದಲಿ ಕುಂಕುಮದ

ಕಸ್ತೂರಿಯ ಬೊಟ್ಟನಿಡೆ ನಿನ್ನ ಫಣೆಗೆ

ಕಸ್ತೂರಿಯ ಬೊಟ್ಟನಿಡೆ

ಹೆತ್ತವರ ಕುಲಕೆ ಕುಂದು ಬಾರದ ಹಾಗೆ

ಮುತ್ತಿನ ಮೂಗುತಿಯನ್ನಿಡೆ ॥

ಕರ್ತೃಪತಿಯ ಮಾತು ಮೀರಬಾರದು ಎಂಬ

ಮುತ್ತಿನೋಲೆ ಕೊಪ್ಪನ್ನಿಡೆ ನಿನ್ನ ಕಿವಿಗೆ

ಮುತ್ತಿನೋಲೆ ಕೊಪ್ಪನ್ನಿಡೆ

ಹತ್ತು ಮಂದಿಯ ಕೈಲಿ ಹೌದೌದೆನಿಸಿಕೊಂಬ

ಮಸ್ತಕ ಮಕುಟವಿಡೆ ॥ ೧ ॥

ಅರೆಘಳಿಗೆ ಪತಿಯ ಅಗಲಬಾರದು ಎಂಬ
ಅಚ್ಚ ಮಂಗಳಸೂತ್ರ ಕಟ್ಟಿ, ನಿನ್ನ ಕೊರಳಿಗೆ,
ಅಚ್ಚ ಮಂಗಳಸೂತ್ರ ಕಟ್ಟಿ
ಪರಮಪುರುಷನು ನಿನ್ನ
ಪಡೆದ ತಂದೆಯೆಂಬ ಪದಕ ಸರವ ಹಾಕೆ ॥
ಕರೆದೊಬ್ಬರಿಗೆ ಅನ್ನವಿಕ್ಕುವೆನೆಂತೆಂಬ
ಹರಡಿ ಕಂಕಣವನಿಡೆ
ನಿನ್ನ ಕೈಗೆ ಹರಡಿ ಕಂಕಣವನಿಡೆ
ನೆರೆಹೊರೆಯವರೆಲ್ಲ ಸರಿಯೆಂಬಂಥ
ಬಿರುದಿನೊಡ್ಯಾಣವಿಡೆ ॥ ೨ ॥

ಮಾನ ಹೊರಗೆ ಬಿಚ್ಚೆನೆಂಬ ಕಂಭಾವತಿಯ
ನೇಮದ ಮಡಿಯನುಡೆ
ನಿನ್ನ ಮೈಗೆ ನೇಮದ ಮಡಿಯನುಡೆ
ಹೀನ ಗುಣವ ಬಿಟ್ಟು ಹಿತದಲ್ಲಿದ್ದೇನೆಂಬ
ಹೆಚ್ಚಿನ ಕುಪ್ಪಸವ ತೊಡೆ ॥
ಜ್ಞಾನ ನಿಧಿಗಳಾದ ಗುರುಗಳ ಪಾದ-
ಕ್ಕಾನತಳಾಗಿ ಬಾಳೆ ಗುರುಗಳ ಪಾದ-
ಕ್ಕಾನತಳಾಗಿ ಬಾಳೆ
ಮೌನಿಗಳೊಡೆಯ ಶ್ರೀ ಪುರಂದರ ವಿಠಲನ
ಪ್ರೇಮ ಸೆರಗಿಲಿ ಕಟ್ಟಿ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೃಹಿಣಿಯೊಬ್ಬಳ ವಸ್ತ್ರಾಲಂಕರಣಗಳು ಒಡವೆ ಇತ್ಯಾದಿಗಳು ಆಕೆಯ ಸೌಂದರ್ಯ ವರ್ಧನೆಗೆ ಹೇಗೆ ಪೋಷಕವಾಗುತ್ತವೆಯೋ ಹಾಗೆಯೇ ಹೆಣ್ಣಿನ ಬಾಳಿನಲ್ಲಿ ಶೀಲ, ವಂಶ ಗೌರವವನ್ನು ಕಾಪಾಡುವ ಹೊಣೆ, ಪತಿಯನ್ನು, ನೆರೆಯವರನ್ನು, ಪರಪುರುಷರನ್ನು ಗುರು ಹಿರಿಯರನ್ನು ಕಾಣಬೇಕಾದ ಬಗೆ ಕೂಡ ಮುಖ್ಯ.

ಇವೇ ಆಕೆಯ ವಸ್ತ್ರಾಭರಣಗಳು. ಆದರ್ಶ ಗೃಹಿಣಿಯೊಬ್ಬಳ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವ ಪ್ರಯತ್ನ ಕವಿಯದು.

**ಫಣೆ** – ಹಣೆ.

**ಓಲೆ ಕೊಪ್ಪನಿಡೆ** – ಓಲೆಕೊಪ್ಪು. ಕಿವಿಯ ಮೇಲ್ಭಾಗದಲ್ಲಿ ಧರಿಸುವ ಆಭರಣ (ಕೊಡಂಕೆ, ತಾಳಕಪತ್ರ).

**ಮಸ್ತಕ ಮಕುಟ** – ತಲೆಯ ಮೇಲೆ ಬೈತಲೆಯ ನಡುವೆ ಇಡುವ ಆಭರಣ.

**ಹರಡಿ ಕಂಕಣ** – ಬಂಗಾರದ ಗುಂಡು, ಹವಳಗಳನ್ನು ಸೇರಿಸಿ ಮಾಡಿದ ಕೈಬಳೆ.

**ಬಿರುದಿನ ಒಡ್ಯಾಣ** – ಕಚ್ಚಳಿ, ಬೆಲೆಬಾಳುವ ನಡುಪಟ್ಟಿ.

**ಕಂಭಾವತಿಯ ನೇಮದ ಮಡಿ** – ಭಾರಿಯ ಅಂಚುಳ್ಳ (ಕಂಬವತಿ) ರೇಷ್ಮೆ ಸೀರೆ.

**ಪಾದಕೆ ಅನತಳಾಗಿ** – ಅಡಿದಾವರೆಗಳಿಗೆ ನಮಸ್ಕಾರ ಮಾಡಿ.

**Classification:** Keerthane
**Ankita:** sri purandara vittala
**Location:** NA
**Category:** samsara chitragalu, jeevana sutra.
**Sub-Category:** bangara, abharana, mangala, muttaide, ranga, divya, Kasturi, kivi, jana, pati, tande, anna, kai, jnana, prema,
**Pravachana:** NA
**Explanation:** NA